**<u>ಅಸಲು ದಾವಾ. ನಂಃ 389/2023</u>**

**ಪಿಡಬ್ಲ್ಯೂ - 1 ನಿಂಗನಗೌಡ ಪಾಟೀಲ**

**<u>ಸಾಕ್ಷಿಯನ್ನು ದಿನಾಂಕಃ 14.11.2025 ರಂದು ಕರೆಯಿಸಿ,ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ಎಸ್.ಬಿ. ವಕೀಲರಿಂದಃ</u>**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ 24 ಎಕರೆ ಆಸ್ತಿಗಳು ಇರುತ್ತವೆ. ನಾವು 4 ಜನ ಅಣ್ಣ-ತಮ್ಮಂದಿರು ಮತ್ತು ಇಬ್ಬರೂ ಸಹೋದರಿಯರು. ನಾವೆಲ್ಲರೂ ಕೂಡಿಯೇ ಇರುತ್ತೇವೆ. ನಮ್ಮ ಆಸ್ತಿಗಳ ಸರ್ವೇ ನಂಬರ 64, 82, 45 ಇನ್ನೊಂದು ಸರ್ವೇ ನಂಬರ ನೆನಪಿಲ್ಲ. ಸರ್ವೇ ನಂಬರ 82 ರಲ್ಲಿ 6 ಎಕರೆ 20 ಗುಂಟೆ ಇರುತ್ತದೆ. ಸರ್ವೇ ನಂಬರ 64 ರಲ್ಲಿ 13 ಎಕರೆ 20 ಗುಂಟೆ ಇರುತ್ತದೆ. ಸರ್ವೆ ನಂಬರ 45 ರಲ್ಲಿ 1 ಎಕರೆ 20 ಗುಂಟೆ ಇರುತ್ತದೆ. ಇನ್ನೊಂದು ಸರ್ವೇ ನಂಬರ ನೆನಪಿಲ್ಲ 4 ಎಕರೆ ಇರುತ್ತದೆ ಅದರಲ್ಲಿ ಕೆನಾಲ ಹಾಯ್ದು ಹೋಗಿರುತ್ತದೆ.

2. ಸರ್ವೇ ನಂಬರ 82 ಮತ್ತು 64 ನಾವು 3 ಜನ ಅಣ್ಣತಮ್ಮಂದಿರ ಹೆಸರಿಗೆ ಜಂಟಿಯಾಗಿರುತ್ತವೆ. ಇನ್ನೊಂದು ಸರ್ವೇ ನಂಬರ ವೀರುಪಾಕ್ಷಗೌಡ ಶಂಕರಗೌಡ ಪಾಟೀಲರವರ ಹೆಸರಿನಲ್ಲಿರುತ್ತದೆ. 1 ಎಕರೆ 20 ಗುಂಟೆ ನನ್ನ ಹೆಸರಿನಲ್ಲಿರುತ್ತದೆ. ಈಗ ಮೇಲೆ ಹೇಳಿದ ಯಾವುದೇ ಆಸ್ತಿಗಳಿಗೂ ಮತ್ತು ನಮ್ಮ ಮನೆತನಕ್ಕೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸುಳ್ಳು. ನಾನು ವ್ಯವಸಾಯ ಮಾಡುತ್ತೇನೆ. ವ್ಯವಸಾಯದಿಂದ ನನಗೆ ಆದಾಯ ವರ್ಷಕ್ಕೆ 20 ಲಕ್ಷ ಆದಾಯ ಇರುತ್ತದೆ. 20 ಲಕ್ಷ ಆದಾಯ ಬರುತ್ತದೆ ಎಂಬುದಕ್ಕೆ ನನ್ನ ಬಳಿ ದಾಖಲೆಗಳು ಇಲ್ಲ.

3. ನಾನು ವ್ಯವಸಾಯ ಮಾಡುವುದರಿಂದ ಪ್ರತಿವರ್ಷ 20 ಲಕ್ಷ ಆದಾಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೊಂದಿಗೆ ಎಷ್ಟು ಸರ್ವೇ ನಂಬರ ಆಸ್ತಿಗಳಿಗೆ ಸಂಬಂಧಿಸಿದಂತೆ ವ್ಯವಹಾರ ಆಗಿದೆ ಎಂದರೆ 4 ಆಸ್ತಿಗಳಿಗೆ ಸಂಬಂಧಿಸಿದಂತೆ ವ್ಯವಹಾರ ಆಗಿರುತ್ತದೆ. ಸದರಿ 4 ಆಸ್ತಿಗಳ ಸರ್ವೆ ನಂಬರ 137/1+2 ಬಿ/2, ಕ್ಷೇತ್ರ 2 ಎಕರೆ 27 ಗುಂಟೆ. ಸದರಿ ಆಸ್ತಿಯ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಸರ್ವೇ ನಂಬರ 137/1+2 ಬಿ/1, 1 ಎಕರೆ ಇರುತ್ತದೆ. ಅದರ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಸರ್ವೇ ನಂಬರ 136/ಬಿ, ಕ್ಷೇತ್ರ 4 ಎಕರೆ 5 ಗುಂಟೆ, ಇದರ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಸರ್ವೇ ನಂಬರ 14/1+2 ಎ, ಕ್ಷೇತ್ರ 10 ಎಕರೆ 21 ಗುಂಟೆ ಇದರ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಈ ಆಸ್ತಿಗಳನ್ನು ಹೊರತುಪಡಿಸಿ ಪ್ರತಿವಾದಿವಾದಿಯರ ಮನೆತನಕ್ಕೆ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

4. ಈ ಆಸ್ತಿಗಳಿಗೆ ಸಂಬಂಧಿಸಿದಂತೆ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ಪ್ರತಿವಾದಿಗೆ ಆಸ್ತಿಗಳು ಯಾವ ರೀತಿಯಾಗಿ ಬಂದಿರುತ್ತವೆ ಎಂದರೆ ಪರಿಶೀಲಿಸಿರುತ್ತೇನೆ, ಅವು ಆತನಿಗೆ ಪಿತ್ರಾರ್ಜಿತವಾಗಿ ಬಂದಿರುತ್ತವೆ. ಸದರಿ ಪ್ರತಿವಾದಿಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳುವ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಯ

ಹೆಂಡತಿ ಮತ್ತು ಮಕ್ಕಳಿಗೆ ತಿಳಿಸಿಲ್ಲ. ಸದರಿ ವ್ಯವಹಾರ ದಿಃ 26-10-2016 ರಲ್ಲಿ ಆಗಿರುತ್ತದೆ. ದಿಃ 26-10-2016 ಕ್ಕಿಂತ ಪೂರ್ವದಲ್ಲಿ ಖರೀದಿ ಮಾತುಕತೆ ಗುರು-ಹಿರಿಯರ ಸಮಕ್ಷಮ ಹುನಗುಂಡಿ ಗ್ರಾಮದ ಪ್ರತಿವಾದಿಯ ಮನೆಯಲ್ಲಿ ಆಗಿರುತ್ತದೆ. ಸದರಿ ಮಾತುಕತೆ ಕಾಲಕ್ಕೆ ಎಸ್.ಡಿ.ಹಿರೇಮಠ, ಬಸನಗೌಡ ಶಿರಗುಂಪಿ ಮತ್ತು ಬಾಳಪ್ಪ ಜಂಗನ್ನವರ ಇದ್ದರು. ಸದರಿಯವರ ಪೈಕಿ ಬಾಳಪ್ಪ ಜಂಗನ್ನವರ ತೀರಿಕೊಂಡಿರುತ್ತಾರೆ. ಇನ್ನೂ ಉಳಿದವರ ಹೆಸರು ನನಗೆ ನೆನಪಿಲ್ಲ.

5. ನನ್ನ ಊರು ಬೆನಹಾಳ ಇರುತ್ತದೆ. ನಮ್ಮ ಊರಿನಿಂದ ಇಬ್ಬರೂ ಮಾತುಕತೆಗೆ ಬಂದಿದ್ದೇವು. ನಾನು ಮತ್ತು ಬಾಳಪ್ಪ ಜಂಗನ್ನವರ ಬಂದಿದ್ದೇವು. ಜಂಗನ್ನವರನ್ನು ಹೊರತುಪಡಿಸಿ ನನ್ನ ಪರವಾಗಿ ಬೇರೆ ಯಾರು ಬಂದಿರುವುದಿಲ್ಲ. ಹೊಲದ ಮಾಲೀಕರು ರೂ. 50 ಲಕ್ಷ ಕ್ಕೆ ಮಾರಾಟಕ್ಕೆ ಹಚ್ಚಿದ್ದರು. ಎಕರೆಗೆ ಎಷ್ಟು ಎಂದು ಮಾತನಾಡಲಿಲ್ಲ. ಒಟ್ಟಾರೆಯಾಗಿ 50 ಲಕ್ಷಕ್ಕೆ ಮಾರಾಟ ಮಾಡುವುದಾಗಿ ಹೇಳಿದರು. ನಾನು ರೂ. 50 ಲಕ್ಷಕ್ಕೆ ಖರೀದಿ ಮಾಡುವುದಾಗಿ ಒಪ್ಪಿಕೊಂಡೆ. ನಾವು ಮಾತುಕತೆಗೆ ಕೂಡಿದಾಗ ಮದ್ಯಾಹ್ನ 12.00 ಗಂಟೆಯಾಗಿತ್ತು. ಮಾತುಕತೆಯಾದ ದಿನ ಯಾವುದೇ ಮುಂಗಡ ಹಣ ಪಾವತಿಸಿಲ್ಲ. ಕರಾರು ಪತ್ರ ಆದ ದಿನ ರೂ. 20 ಲಕ್ಷ ಹಣವನ್ನು ಮುಂಗಡವಾಗಿ ಪಾವತಿಸಿರುತ್ತೇನೆ. ಕರಾರು ಪತ್ರ ನೋಂದಣಿಯಾಗಿ ಹೊರಗೆ ಬಂದು ನನ್ನ ಕೈಗೆ ಕರಾರು ಪತ್ರವನ್ನು ಕೊಟ್ಟ ನಂತರ ನಾನು ಹಣ ಕೊಟ್ಟಿರುತ್ತೇನೆ.

6. ಬಸನಗೌಡ ಚನ್ನಪ್ಪಗೌಡ ಪಾಟೀಲರವರ ಪರಿಚಯ ಇರುತ್ತದೆ. ಸದರಿಯವರು ಬೆನಹಾಳ ಗ್ರಾಮದವರು ಇರುತ್ತಾರೆ. ಸದರಿಯವರು ವ್ಯವಸಾಯ ಮಾಡುತ್ತಾರೆ. ಸದರಿಯವರು ನನಗೆ ಚಿಕ್ಕಪ್ಪನಾಗಬೇಕು. ಸದರಿಯವರು ಒಕ್ಕಲುತನ ಮಾಡುವುದಿಲ್ಲ, ಹೊಳೆಆಲೂರಿನಲ್ಲಿ ದಲ್ಲಾಳಿ ಮತ್ತು ಎಣ್ಣೆ ಅಂಗಡಿ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಅವರು ಹೊಳೆ-ಆಲೂರಿನಲ್ಲಿ ದೊಡ್ಡ ವ್ಯಾಪಾರಸ್ಥರು ಇರುತ್ತಾರೆ ಎಂದರೆ ಸರಿ.

<u>ಅಸಲು ದಾವಾ. ನಂಃ 389/2023</u><br>ಪಿಡಬ್ಲ್ಯೂ - 1 ನಿಂಗನಗೌಡ ಪಾಟೀಲ

7. ಪ್ರತಿವಾದಿ ತನ್ನ ಜಮೀನಿನಲ್ಲಿ ಬೆಳೆದ ಬೆಳೆಗಳನ್ನು ಬಸನಗೌಡ ಪಾಟೀಲರವರ ದಲ್ಲಾಳಿ ಅಂಗಡಿಗೆ ಬಿಡುತ್ತಿದ್ದರು ಎಂದರೆ ಸುಳ್ಳು. ಪ್ರತಿವಾದಿಗೆ ಹಣದ ಅಡಚಣೆಯಿದ್ದಾಗ ಹಣ ಕೊಡುವುದು ಮತ್ತು ತೆಗೆದುಕೊಳ್ಳುವುದನ್ನು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ಪ್ರತಿವಾದಿಗೆ ಹಣಕಾಸಿನ ಅವಶ್ಯಕತೆ ಇದ್ದಾಗ ರೂ. 16 ಲಕ್ಷ ಕೈಗಡ ಸಾಲವನ್ನು ಬಸನಗೌಡ ಪಾಟೀಲರವರದಿಂದ ಪಡೆದುಕೊಂಡಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಹಣ ಕೊಡುವಾಗ ಬಸನಗೌಡ ಪಾಟೀಲರವರು ನಾನು ಹೇಳಿದವರ ಹೆಸರಿಗೆ ಆಸ್ತಿಗಳನ್ನು ಕರಾರು ಪತ್ರವನ್ನು ಬರೆದುಕೊಟ್ಟರೇ ಸಾಲ ಕೊಡುವುದಾಗಿ ಹೇಳಿದ್ದರು ಎಂದರೆ ಸುಳ್ಳು. ಆ ರೀತಿ ಬಸನಗೌಡ ಪಾಟೀಲರವರು ದಲ್ಲಾಳಿ ಅಂಗಡಿಯ ಖಾತೆಗೆ ಖರ್ಚು ಹಾಕಿ ಪ್ರತಿವಾದಿಗೆ ರೂ. 16 ಲಕ್ಷ ಸಾಲವನ್ನು ಕೊಟ್ಟರು ಎಂದರೆ ಸುಳ್ಳು. ನನ್ನ ಚಿಕ್ಕಪ್ಪ ಹೇಳಿದಂತೆ ನನ್ನ ಹೆಸರಿಗೆ ಪ್ರತಿವಾದಿಯು ಕರಾರು ಪತ್ರ

ಬರೆದುಕೊಟ್ಟಿರುತ್ತಾರೆ ಎಂದರೆ ಸುಳ್ಳು.

8. ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ ಮತ್ತು ಕರಾರು ಪತ್ರವನ್ನು ಪ್ರತಿವಾದಿಯು ನನಗೆ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಬ್ ರಜಿಸ್ಟರ ಕಚೇರಿಯಲ್ಲಿ ಕರಾರು ಪತ್ರವನ್ನು ಪಡೆದುಕೊಂಡ ನಂತರ ರೂ. 20 ಲಕ್ಷ ಹಣವನ್ನು ಕೊಡುವಾಗ ಯಾವ ಬ್ಯಾಂಕಿನಿಂದ ತೆಗೆಯಿಸಿಕೊಂಡು ಬಂದಿರಿ ಎಂದರೆ ಸಾಕ್ಷಿಯು ರೂ. 20 ಲಕ್ಷ ಹಣ ಇದ್ದುದ್ದರಿಂದ ಕೊಟ್ಟಿರುತ್ತೇನೆ. ನಮ್ಮ ಮನೆಯಲ್ಲಿ ರೂ. 20 ಲಕ್ಷ ಹಣ ಇತ್ತು ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ನನ್ನ ಅಕ್ಕನ ಜಮೀನು ನೆರೆ ಹಾವಳಿ ಉಂಟಾಗಿ ಹೋಗಿತ್ತು ಅದರಿಂದ ಬಂದ ಪರಿಹಾರ ಹಣ ರೂ. 10 ಲಕ್ಷ ಹಾಗೂ ನಮ್ಮ ಮನೆಯಲ್ಲಿ ಇಟ್ಟುಕೊಂಡಿದ್ದ ರೂ. 10 ಲಕ್ಷ ಸೇರಿಕೊಂಡು ಪ್ರತಿವಾದಿಗೆ ಕೊಟ್ಟಿರುತ್ತೇನೆ.

9. ನಮ್ಮ ಅಕ್ಕನ ಹೆಸರು ಬಸವಣ್ಣೆವ್ವ ಜಂಗನ್ನವರ. ಅವರಿಗೆ ಆಸ್ತಿ ಹೋಗಿತ್ತು ಮತ್ತು ಪರಿಹಾರ ಹಣ ಬಂದಿತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಲು ತೊಂದರೆಯಿಲ್ಲ. ನಾನು ಅವರಿಂದ ರೂ. 10 ಲಕ್ಷ ಹಣ ಪಡೆದುಕೊಂಡಿದ್ದೆ, ಅವರಿಗೆ ಎಷ್ಟು ಹಣ ಬಂದಿತ್ತು ಎಂದು ಗೊತ್ತಿಲ್ಲ. ನಾನು ರೂ. 10 ಲಕ್ಷ ಹಣವನ್ನು ಪಡೆದುಕೊಂಡಿದ್ದಕ್ಕೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ. ದಾವೆಯನ್ನು ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ದಾವೆಯಲ್ಲಿ ನಮ್ಮ ಅಕ್ಕಳಿಂದ ರೂ. 10 ಲಕ್ಷ ಪಡೆದು ನನ್ನ ಬಳಿ ಇದ್ದ ರೂ. 10 ಲಕ್ಷ ಸೇರಿಸಿ ರೂ. 20 ಲಕ್ಷ ಹಣ ಕೊಟ್ಟಿರುತ್ತೇನೆ ಎಂದು ಹೇಳಿ ಬರೆಸಿಲ್ಲ.

10. ನನಗೆ ರೂ. 50 ಲಕ್ಷ ಹಣ ಅಥವಾ ರೂ. 20 ಲಕ್ಷ ಹಣವನ್ನು ಕೊಟ್ಟು ಆಗಲಿ ಜಮೀನುಗಳನ್ನ ಖರೀದಿಸಲು ಯಾವುದೇ ಶಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಪ್ರತಿವಾದಿಗೆ ನೀಡಿದ ಹಣದ ಭದ್ರತೆಗಾಗಿ ನನ್ನ ಹೆಸರಿಗೆ ಕರಾರು ಪತ್ರ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿಯು ರೂ. 16 ಲಕ್ಷ ಹಣವನ್ನು ಹಿರಿಯರನ್ನು ಕರೆದುಕೊಂಡು ಹೋಗಿ ಬಸನಗೌಡ ಪಾಟೀಲರವರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಆಸ್ತಿ ಬೇಕು ಎಂದು ನಾನು ಖರೀದಿಸಿ ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನಿಗೆ ಹಣವನ್ನು ವಾಪಸ್ಸು ಕೊಟ್ಟ ನಂತರ ಅವರು ತಮ್ಮ ಪುಸ್ತಕದಲ್ಲಿ ಜಮಾ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದಕ್ಕೆ ಇದಕ್ಕೆ ಸಂಬಂದ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ರೂ. 16 ಲಕ್ಷ ಹಣವನ್ನು ಪ್ರತಿವಾದಿಯು ಮರುಪಾವತಿಸಿದ ನಂತರ ನಿಂಗನಗೌಡರವರ ಹೆಸರಿಗೆ ಬರೆದುಕೊಟ್ಟಿರುವ ಕರಾರು ಪತ್ರವನ್ನು ವಾಪಸ್ಸು ಕೊಡಲು ಕೇಳಿದರು ಎಂದರೆ ಸಾಕ್ಷಿಯು ನಾನು ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನನ್ನ ಚಿಕ್ಕಪ್ಪನಿಗೆ ಪ್ರತಿವಾದಿ ಕೇಳಿದಾಗ ಪತ್ರಗಳು ಲಾಕರನಲ್ಲಿ ಇರುತ್ತವೆ, ಅದರ ಕೀ ನನ್ನ ಮಕ್ಕಳ ಬಳಿ ಇರುತ್ತದೆ ಎಂದು ಹೇಳಿದ್ದರು ಎಂದರೆ ಸುಳ್ಳು.

11. ಆ ರೀತಿ ಹಣ ಸ್ವೀಕರಿಸಿದ ಬಗ್ಗೆ ಪಾವತಿಕೊಡಿ ಎಂದು ಪ್ರತಿವಾದಿಗೆ ಕೇಳಿದಾಗ ದಲ್ಲಾಳಿ ಅಂಗಡಿಯ ರಜಿಸ್ಟರಗೆ ಜಮಾ ತೆಗೆದುಕೊಂಡಿರುತ್ತೇವೆ ಹಣ ಬರುವುದು ಬಾಕಿ ಇರುವುದಿಲ್ಲ ಎಂದು ಸಮಜಾಯಿಸಿ ನೀಡಿ ಕಳುಹಿಸಿರುತ್ತಾರೆ ಎಂದರೆ ಸುಳ್ಳು. ನಂತರ ಪ್ರತಿವಾದಿಯು ಬಸನಗೌಡ ಪಾಟೀಲರವರು ಭೇಟಿಯಾಗಿ ನಿಂಗನಗೌಡರವರ ಹೆಸರಿಗೆ ಆಗಿರುವ ಕರಾರು ಪತ್ರವನ್ನು ರದ್ದುಗೊಳಿಸಿಕೊಡಿ ಎಂದು ಹಲವಾರು ಬಾರಿ ಕೇಳಿರುತ್ತಾರೆ ಎಂದರೆ ಸುಳ್ಳು. ಬಸನಗೌಡ ಪಾಟೀಲರವರು ಪ್ರತಿವಾದಿಯಿಂದ ಅಕ್ರಮ ಲಾಭ ಪಡೆದುಕೊಳ್ಳುವ ಉದ್ದೇಶದಿಂದ ರೂ. 16 ಲಕ್ಷ ಹಣಕ್ಕೆ ಬಡ್ಡಿ ಕೊಡುವುದು ಬಾಕಿ ಇದೆ ಆ ಬಡ್ಡಿಹಣವನ್ನು ಕೊಟ್ಟರೇ ರದ್ದುಪಡಿಸಿಕೊಳ್ಳುವುದಾಗಿ ತಿಳಿಸಿ ಅದನ್ನು ದುರುಪಯೋಗಪಡಿಸಿಕೊಂಡು ನನ್ನ ಮುಖಾಂತರ ಈ ದಾವೆಯನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯ ನಡುವೆ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ರೂ. 20 ಲಕ್ಷ ಹಣವನ್ನು ಮುಂಗಡವಾಗಿ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ನನ್ನ ಹೆಸರಿನಲ್ಲಿ ಬ್ಯಾಂಕನಲ್ಲಿ ಹಣ ಜಮಾ ಇರುವುದಿಲ್ಲ ಮತ್ತು ಅದೇ ರೀತಿ ಮನೆಯಲ್ಲಿ ಹಣ ಇರುವುದಿಲ್ಲ. ನಾನು ನನ್ನ ದಾವೆಯಲ್ಲಿ ಕರಾರು ಪತ್ರದಲ್ಲಿ ತಿಳಿಸಿದಂತೆ ನಡೆದುಕೊಳ್ಳಲು ತಯಾರು ಇರುತ್ತೇನೆ ಎಂದು ಸುಳ್ಳು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೋರಿಕೊಂಡಂತೆ ಯಾವುದೇ ಪರಿಹಾರವನ್ನು ಪಡೆದುಕೊಳ್ಳಲು ನಾನು ಅರ್ಹನಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-
ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.